# ಚುನಾವಣೆ ಸಂಹಿತೆ ಶೌಚಕ್ಕೂ ತಗುಲಿತ್ತೆ!

ಬೆಂಗಳೂರು: ಚುನಾವಣೆ ಸಂದರ್ಭ ಜಾರಿಯಾಗುವ ನೀತಿ ಸಂಹಿತೆಯಿಂದ ಜನಪ್ರತಿನಿಧಿಗಳು ಎದುರಿಸುವ ಮತ್ತು ಎದುರಿಸಿದ ಸಮಸ್ಯೆಗಳ ಬಗ್ಗೆ ವಿಧಾನಪರಿಷತ್‌ನಲ್ಲಿ ಸ್ವಾರಸ್ಯಕರ ಚರ್ಚೆ ನಡೆಯಿತು.

ಸಂವಿಧಾನ ಮೇಲಿನ ಚರ್ಚೆ ವೇಳೆ ಸಚಿವ ಜೆ.ಸಿ.ಮಾಧುಸ್ವಾಮಿ ಮಾತನಾಡುತ್ತಾ, ಚುನಾವಣೆಯಲ್ಲಿ ನೀತಿ ಸಂಹಿತೆ ಜಾರಿ ಮಾಡುವುದು ಕೂಡ ಸಂವಿಧಾನದಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಈ ನೀತಿ ಸಂಹಿತೆಯಿಂದ



ಸಾಕಷ್ಟು ಸಮಸ್ಯೆಗಳಾಗುತ್ತಿವೆ. ಹಿಂದೆ ಮಾಜಿ ಮುಖ್ಯಮಂತ್ರಿಗಳೊಬ್ಬರು ಚುನಾವಣೆ ಸಂದರ್ಭ ಚಿಕ್ಕನಾಯಕನಹಳ್ಳಿಯ ಪ್ರವಾಸಿ ಮಂದಿರದಲ್ಲಿ ಶೌಚಗೃಹಕ್ಕೆ ಹೋಗಲು ಅಧಿಕಾರಿಗಳು ಅವಕಾಶ ನೀಡಿರಲಿಲ್ಲ ಎಂದು ಸ್ಮರಿಸಿದರು. ಅದೇ ರೀತಿ ಕಳೆದ ಉಪಚುನಾವಣೆ ವೇಳೆ ಮದ್ದೂರಿಗೆ ಹೋಗಬೇಕಾದ ಪ್ರಸಂಗ ಬಂದಾಗ, ಅಧಿಕಾರಿಗಳು ನನ್ನನ್ನು ತಡೆದು ಸರ್ಕಾರಿ ಕಾರಿನಲ್ಲಿ ಮಂಡ್ಯಕ್ಕೆ ಪ್ರವೇಶ ನಿರಾಕರಿಸಿದರು. ಕೆ.ಆರ್.ಪೇಟೆಯಲ್ಲಿ ಉಪಚುನಾವಣೆ ನಡೆದರೆ, ಮಂಡ್ಯಕ್ಕೆ ನಾನು ಹೋಗದಂತೆ ಮಾಡಲಾಯಿತು. ಈ ರೀತಿಯ ಹಲವು ಘಟನೆಗಳು ನಡೆದಿವೆ ಎಂದರು.

» ಮೇಲ್ಮನೆಯಲ್ಲಿ ಸ್ವಾರಸ್ಯಕರ ಚರ್ಚೆ

» ಸಿಎಂಗೆ ಮೂತ್ರ ವಿಸರ್ಜನೆಗೂ ಬಿಡದ ಅಧಿಕಾರಿಗಳು

ಇದಕ್ಕೆ ಧ್ವನಿಗೂಡಿಸಿದ ಸಚಿವ ಜಗದೀಶ ಶೆಟ್ಟರ್, ನಾನು ಸಿಎಂ ಆಗಿದ್ದಾಗ ಬಾದಾಮಿಯ ಕೆರೂರಿನಲ್ಲಿ ಚುನಾವಣಾ ಪ್ರಚಾರ ಮುಗಿಸಿ ನಂತರ ಅಲ್ಲಿದ್ದ ಸರ್ಕಾರಿ ಶಾಲೆಯಲ್ಲಿ ಶೌಚಗೃಹಕ್ಕೆ ತೆರಳು ಮುಂದಾದೆ. ಅಧಿಕಾರಿಗಳು ಅವಕಾಶ ನೀಡಲಿಲ್ಲ. ಅನಂತರ ಪಕ್ಷದ ಕಾರ್ಯಕರ್ತರ ಮನೆಗೆ ತೆರಳಬೇಕಾಯಿತು ಎಂದು ನೀತಿ ಸಂಹಿತೆಯಿಂದಾದ ಸಮಸ್ಯೆಯನ್ನು ವಿವರಿಸಿದರು. ಆಗ ಸದನ ಕೆಲಕಾಲ ನಗೆಗಡಲಲ್ಲಿ ತೇಲಿತು.




ಜೆಡಿಎಸ್‌ನ ಬಸವರಾಜ ಹೊರಟ್ಟಿ ಕೂಡ ಅದೇ ರೀತಿಯ ಅನುಭವ ಹಂಚಿಕೊಂಡರಲ್ಲದೆ, ಶೌಚಗೃಹವಿಲ್ಲದಿದ್ದರೆ ಗೋಡೆ ಪಕ್ಕ ಮೂತ್ರ ವಿಸರ್ಜಿಸುವಂತೆ ಅಲ್ಲಿದ್ದವರು ಸಲಹೆ ನೀಡಿದರು ಎಂದರು. ಅದಕ್ಕೆ ಮಾಧುಸ್ವಾಮಿ, ಗೋಡೆ ಪಕ್ಕ ಮೂತ್ರ ವಿಸರ್ಜಿಸಿದರೆ ಶಿಕ್ಷಾರ್ಹ ಅಪರಾಧವಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಆಗ ಮಧ್ಯಪ್ರವೇಶಿಸಿದ ಕಾಂಗ್ರೆಸ್‌ನ ಸಿ.ಎಂ.ಇಬ್ರಾಹಿಂ, ಜನಪ್ರತಿನಿಧಿಗಳು 5 ವರ್ಷ ಅಧಿಕಾರಿಗಳ ಮೇಲೆ ಆದೇಶ ಚಲಾಯಿಸಿರುತ್ತಾರೆ. ಆ ಸಿಟ್ಟನ್ನೆಲ್ಲ ಅಧಿಕಾರಿಗಳು ನೀತಿ ಸಂಹಿತೆ ಜಾರಿಯಾದ 1 ತಿಂಗಳಲ್ಲಿ ಜನಪ್ರತಿನಿಧಿಗಳ ಮೇಲೆ ತೀರಿಸಿಕೊಳ್ಳುತ್ತಾರೆ ಎಂದರು.

## ಸಭೆ ನಡೆಸಿ ಸಮಸ್ಯೆ ನಿವಾರಿಸಿ

ಕೊನೆಗೆ ನೀತಿ ಸಂಹಿತೆ ಸಮಸ್ಯೆಯನ್ನು ಪರಿಹರಿಸುವ ಕುರಿತು ಸಲಹೆ ನೀಡಿದ ಜಗದೀಶ ಶೆಟ್ಟರ್, ಎಲ್ಲ ಪಕ್ಷಗಳ ಮುಖಂಡರ ಸಮಿತಿ ರಚಿಸಿ ಲೋಪ ಸರಿಪಡಿಸಬಹುದು. ಇಲ್ಲದಿದ್ದರೆ, ಸಭಾಧ್ಯಕ್ಷರು ಮತ್ತು ಸಭಾಪತಿಗಳು ಮಾತುಕತೆ ನಡೆಸಿ ಚುನಾವಣಾ ಆಯೋಗ, ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಸಭೆ ನಡೆಸಿ ಸಮಸ್ಯೆಗಳ ನಿವಾರಣೆಗೆ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

# ಡ್ರಗ್ಸ್ ವಿರುದ್ಧ ಸರ್ಕಾರ ಸಮರ

## ಗೃಹ ಸಚಿವ ಬೊಮ್ಮಾಯಿ ಘೋಷಣೆ | ಡಾರ್ಕ್‌ವೆಬ್ ಮೇಲೂ ನಿಗಾ

ವಿಜಯವಾಣಿ ಸುದ್ದಿಜಾಲ ಬೆಂಗಳೂರು


ಡ್ರಗ್ಸ್ ವಿರುದ್ಧ ನಮ್ಮ ಸರ್ಕಾರ ಯುದ್ಧ ಘೋಷಿಸಿದೆ. ಈ ವಿಷಯದಲ್ಲಿ ಶೂನ್ಯ ಸಹಿಷ್ಣುತೆ ಹೊಂದಿದ್ದು, ಕೇವಲ ಮಾದಕ ವಸ್ತು ಮಾರಾಟ ಮಾಡುವವರನ್ನು ಬಂಧಿಸಿದರೆ ಪ್ರಯೋಜನವಾಗುವುದಿಲ್ಲ. ಅದರ ಮೂಲ ಪತ್ತೆ ಹಚ್ಚಿ ಬೆನ್ನುಮೂಳೆ ಮುರಿಯಬೇಕಾಗಿದೆ. ಆ ಕೆಲಸ ಮಾಡುತ್ತೇವೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ವೇಳೆ ಕಾಂಗ್ರೆಸ್‌ನ ಕೆ.ಜೆ.ಜಾರ್ಜ್ ಪ್ರಶ್ನೆಗೆ ಉತ್ತರಿಸಿದ ಅವರು, ಇಂಟರ್ನೆಟ್ ಮೂಲಕವೂ ದೊಡ್ಡ ಮಟ್ಟದಲ್ಲಿ ಮಾದಕ ವಸ್ತು ಮಾರಾಟ ನಡೆಯುತ್ತಿದೆ. ಟಿಒಆರ್ ಎಂಬ ಸರ್ಚ್ ಇಂಜಿನ್ ಡಾರ್ಕ್ ವೆಬ್ ಮೂಲಕವೂ ತರಿಸಲಾಗುತ್ತಿದೆ. ಇದನ್ನು ಬೇಧಿಸುವ ಕೆಲಸವನ್ನು ಪೊಲೀಸರು ಮಾಡುತ್ತಿದ್ದಾರೆ ಎಂದರು. ಡ್ರಗ್ಸ್ ಕೇವಲ ಸರ್ವಜ್ಞನಗರ, ಕರ್ನಾಟಕಕ್ಕೆ ಸಂಬಂಧಿಸಿದ ಸಮಸ್ಯೆಯಲ್ಲ. ಅಂತಾರಾಷ್ಟ್ರೀಯ ಮಟ್ಟದ ಸಮಸ್ಯೆಯಾಗಿದೆ. ಇದೊಂದು ಸಾಮಾಜಿಕ ಪಿಡುಗು. ಕೇವಲ ಪೊಲೀಸರಿಂದ ನಿಯಂತ್ರಿಸಲು ಸಾಧ್ಯವಿಲ್ಲ. ಸಮಾಜದ ಸಹಕಾರ ಮುಖ್ಯವೆಂದರು.

ಡಾರ್ಕ್ ವೆಬ್‌ಗಳಿಗೆ ಯಾರು ಬೇಕಾದರೂ ಪ್ರವೇಶ ಮಾಡುವಂತಿಲ್ಲ, ಆಹ್ವಾನ ಸ್ವೀಕರಿಸಿದವರಿಗಷ್ಟೇ ಪ್ರವೇಶಾವಕಾಶ ಇರುತ್ತದೆ. ಅಲ್ಲಿ ಡ್ರಗ್ಸ್, ಶಸ್ತ್ರಾಸ್ತ್ರ ವ್ಯಾಪಾರ ವೇಶ್ಯಾವಾಟಿಕೆಗೆ ಬಳಕೆಯಾಗುತ್ತಿದೆ. ಇದರ ಮೇಲೆ ಪೊಲೀಸ್ ನಿಗಾ ಇಟ್ಟಿದೆ. ಸಿಸಿಬಿ ಘಟಕ ಹಲವೆಡೆ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿದೆ. ಬೆಂಗಳೂರಿನ ಡಿಜೆ ಹಳ್ಳಿ, ಕೆಂಗೇರಿ, ಬಸವೇಶ್ವರನಗರ ಮುಂತಾದೆಡೆ ಪ್ರಕರಣ ದಾಖಲಿಸಲಾಗಿದೆ. ಈ ದಾಳಿಗಳು ಮುಂದುವರಿಯಲಿವೆ ಎಂದರು.

ಆರೋಪಿಗಳಿಗಿಂತ ಒಂದು ಹೆಜ್ಜೆ ಸ್ಪೀಡ್ ಪೋಸ್ ಮೂಲಕವೂ ಡ್ರಗ್ಸ್ ಸರಬರಾಜಾಗುತ್ತಿರುವುದು ಗಮನಕ್ಕೆ ಬಂದಿದೆ. ಇತ್ತೀಚೆಗೆ ಇದೇ ವಿಚಾರವಾಗಿ ಅಂಚೆ ಇಲಾಖೆಯ ನಾಲ್ವರು ಸಿಬ್ಬಂದಿ ಬಂಧಿಸಲಾಗಿದೆ. ಒಟ್ಟಾರೆ ರಾಜ್ಯದಲ್ಲಿ 2019ರಲ್ಲಿ 1652 ಡ್ರಗ್ಸ್ ಪ್ರಕರಣ ದಾಖಲಾಗಿವೆ. ಕಳೆದ ಎರಡು ವರ್ಷಗಳಿಗೆ ಹೋಲಿಸಿದರೆ, 600 ಪ್ರಕರಣಗಳು ಹೆಚ್ಚಾಗಿವೆ. ಅದರರ್ಥ ಸಾಧನೆ ಅಲ್ಲ, ಟ್ರೆಂಡ್ ಹೇಗಿದೆ ಎಂಬುದು ತಿಳಿಯುತ್ತದೆ ಎಂದು ಬೊಮ್ಮಾಯಿ ತಿಳಿಸಿದರು.

ಶಾಲಾ-ಕಾಲೇಜುಗಳಲ್ಲಿ ಡ್ರಗ್ಸ್ ದುಷ್ಪರಿಣಾಮದ ಬಗ್ಗೆ ಅರಿವು ಮೂಡಿಸುವ ಕೆಲಸ ನಡೆಸಲಾಗುತ್ತಿದೆ. ಪಿಂಕ್ ಹೊಯ್ಸಳ ಮತ್ತು ಇತರ ವಿಶೇಷ ಗಸ್ತು ವಾಹನಗಳು ಇದೇ ವಿಚಾರದಲ್ಲಿ ತಿರುಗುತ್ತಿವೆ ಎಂದ ಸಚಿವರು, ಡ್ರಗ್ಸ್ ಮಾರಾಟ, ಸಂಗ್ರಹಣೆಯನ್ನು ಸರ್ಕಾರ ಸಹಿಸಿಕೊಳ್ಳುವುದಿಲ್ಲ. ಅವುಗಳನ್ನು ತಡೆಯಲು ಕಟಿಬದ್ಧವಾಗಿದೆ. ಏಪ್ರಿಲ್‌ನಲ್ಲಿ ದೊಡ್ಡ ಜಾಗೃತಿ ಅಭಿಯಾನ ತೆಗೆದುಕೊಳ್ಳುತ್ತಿದ್ದೇವೆ ಎಂದು ಹೇಳಿದರು.



### 1989ರ ಕಾಯ್ದೆಗೆ ತಿದ್ದುಪಡಿ

ಡ್ರಗ್ಸ್ ಕರೊನಗಿಂತ ಅಪಾಯಕಾರಿ ವೈರಸ್. ಇದು ಎಲ್ಲಿಂದ ಬರುತ್ತದೆ ಎಂದು ಮೂಲ ಪತ್ತೆ ಹಚ್ಚಬೇಕು. ಇದಕ್ಕಾಗಿ ಗುಪ್ತಚರ ಬಲಗೊಳ್ಳಬೇಕು, ಬದ್ಧತೆಯುಳ್ಳ ಅಧಿಕಾರಿಗಳನ್ನು ನೇಮಿಸಬೇಕು ಎಂದು ಮಾಜಿ ಗೃಹ ಸಚಿವ ಕೆ.ಜೆ. ಜಾರ್ಜ್ ಸಲಹೆ ನೀಡಿದರು. ಇದಕ್ಕುತ್ತರಿಸಿದ ಬಸವರಾಜ ಬೊಮ್ಮಾಯಿ, ಈ ವರ್ಷ ವಿಶೇಷ 8 (ಸೆನ್) ಠಾಣೆಗಳನ್ನು ತೆರೆಯಲಾಗಿದೆ. ಜಿಲ್ಲಾ ಕೇಂದ್ರಗಳಲ್ಲಿ ಒಂದೊಂದು ಠಾಣೆಗಳನ್ನು ತೆರೆಯಲಾಗಿದೆ ಎಂದರು. ಮಾದಕ ವಸ್ತುಗಳ ಮಾರಾಟ ನಿಯಂತ್ರಣ ಕಾಯ್ದೆ 1989ರ ಕಾಯ್ದೆ ಬದಲಾಯಿಸಬೇಕಾಗಿದೆ. ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂದು ಭರವಸೆ ನೀಡಿದರು.

### ಅಬಕಾರಿ ಇಲಾಖೆ ಗುರಿ ನಿಯಂತ್ರಣ ಜಿಜ್ಞಾಸೆ

ಅಬಕಾರಿ ಇಲಾಖೆಗೆ ನೀಡುವ ಟಾರ್ಗೆಟ್ ಬಗ್ಗೆ ವಿಧಾನಸಭೆ ಪ್ರಶ್ನೋತ್ತರ ವೇಳೆ ಬಿಸಿಬಿಸಿ ಚರ್ಚೆ ನಡೆಯಿತು. ತಮ್ಮ ಮತಕ್ಷೇತ್ರದ ಶಾಲೆಯೊಂದರ ಮುಂಭಾಗವೇ ಬಾರ್ ಆರಂಭವಾಗಿರುವುದನ್ನು ಸರ್ಕಾರದ ಗಮನಕ್ಕೆ ತಂದ ಕಲಬುರಗಿ ದಕ್ಷಿಣದ ದತ್ತಾತ್ರೇಯ ಸಿ.ಪಾಟೀಲ್ ರೇವೂರ, ಬೆಳಗ್ಗೆ 4 ಗಂಟೆಗೆಲ್ಲ ಬಾರ್ ತೆರೆದಿರುತ್ತದೆ. ಇದರ ವಿರುದ್ಧ ಅಬಕಾರಿ ಸಚಿವರು ಕ್ರಮಕೈಗೊಳ್ಳಲಿ ಎಂದರು. ಇಡೀ ರಾಜ್ಯದಲ್ಲಿ ಈ ಸಮಸ್ಯೆ ಇದೆ, ಪಾನ್‌ಶಾಪ್, ಕಿರಾಣಿ



ಅಂಗಡಿಗಳಲ್ಲೂ ಮದ್ಯ ಮಾರಾಟವಾಗುತ್ತಿದೆ. ಅಧಿಕಾರಿಗಳನ್ನು ಕೇಳಿದರೆ ಟಾರ್ಗೆಟ್ ಎನ್ನುತ್ತಾರೆ ಎಂದು ತಿಳಿಸಿದರು. ರೇವೂರ್‌ಗೆ ಪ್ರಿಯಾಂಕ್ ಖರ್ಗೆ ದನಿ ಗೂಡಿಸಿದರು. ಟಾರ್ಗೆಟ್ ನಿಗದಿ ಮಾಡುವವರ ವಿರುದ್ಧ ಏನು ಕ್ರಮ ಎಂದು ಶಿವಲಿಂಗೇಗೌಡ ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಬಸವರಾಜ ಬೊಮ್ಮಾಯಿ, ಟಾರ್ಗೆಟ್ ವಿಚಾರ ನಿಜವಿದೆ. ಗುರಿ ಮತ್ತು ನಿಯಂತ್ರಣದ ಬಗ್ಗೆ ದೊಡ್ಡ ಜಿಜ್ಞಾಸೆ ಇದೆ ಎಂದು ವಿಷಯಕ್ಕೆ ತೆರೆ ಎಳೆದರು.

## ಕೊಪ್ಪ ಪಿಎಸ್‌ಐ ವಿರುದ್ಧ ಕ್ರಮಕ್ಕೆ ಸೂಚನೆ

ಬೆಂಗಳೂರು: ಸಾರ್ವಜನಿಕರೊಂದಿಗೆ ದುಂಡಾವರ್ತನೆ ತೋರುವ ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಕೊಪ್ಪ ಪೊಲೀಸ್ ಠಾಣೆ ಪಿಎಸ್‌ಐ ಅಯ್ಯನಗೌಡ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಮೈಸೂರಿನ ದಕ್ಷಿಣ ವಲಯ ಐಜಿಪಿ ವಿಪುಲ್ ಕುಮಾರ್ ಅವರಿಗೆ ಗೃಹ ಸಚಿವ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ. ಪಿಎಸ್‌ಐ ಅಯ್ಯನಗೌಡ ಸಾರ್ವಜನಿಕರಿಂದ ಹಣ ವಸೂಲಿ, ದುಂಡಾವರ್ತನೆ, ಅವಾಚ್ಯ ಶಬ್ದಗಳಿಂದ ನಿಂದನೆ ಮಾಡುವುದರ ವಿರುದ್ಧ ಸ್ಥಳೀಯರು ಪ್ರತಿಭಟನೆ ನಡೆಸಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿತ್ತು. ಮಾಧ್ಯಮಗಳ ವರದಿ ಗಮನಿಸಿದ ಗೃಹ ಸಚಿವರು ಮೈಸೂರು ಐಜಿಪಿಗೆ ದೂರವಾಣಿ ಕರೆ ಮಾಡಿ, ಇಂತಹ ಅಶಿಸ್ತು ಸಹಿಸಲು ಸಾಧ್ಯವಿಲ್ಲ.

» ಮೈಸೂರು ಐಜಿಗೆ ಗೃಹ ಸಚಿವರ ಆದೇಶ

ಸಾರ್ವಜನಿಕರೊಂದಿಗೆ ಸೌಜನ್ಯಯುತ ನಡವಳಿಕೆಗೆ ಮೊದಲ ಆದ್ಯತೆ ನೀಡುತ್ತೇವೆ. ಪೊಲೀಸರು ಜನಸ್ನೇಹಿಯಾಗಿರಬೇಕೆ ಹೊರತು ಜನ ವಿರೋಧಿಯಾಗಿರಬಾರದು ಎಂದು ಸೂಚಿಸಿದರು. ಸಾರ್ವಜನಿಕರು ಅಧಿಕಾರಿ ನಡವಳಿಕೆ ವಿರುದ್ಧ ಪ್ರತಿಭಟನೆ ಮಾಡಿದ್ದಾರೆ, ಪ್ರತಿನಿತ್ಯ ಮಾಧ್ಯಮಗಳಲ್ಲಿ ವರದಿಯಾಗುತ್ತಿವೆ. ಇವುಗಳನ್ನು ನೋಡಿಕೊಂಡು ಸುಮ್ಮನಿರಲು ಸಾಧ್ಯವಿಲ್ಲ. ಆದ್ದರಿಂದ ಕೂಡಲೇ ಈ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಿ ಎಂದು ತಿಳಿಸಿದರು.